# ಪಶ್ಚಾತ್ತಾಪಪಟ್ಟು ನಂಬಿರಿ

ಪಶ್ಚಾತ್ತಾಪ ಮತ್ತು ನಂಬಿಕೆಗೆ ಯೇಸುವಿನ ಆಜ್ಞೆಯನ್ನು ಕಲಿಸಲು ಈ ಕೆಳಗಿನವು ಒಂದು ರೂಪುರೇಖೆಯಾಗಿದೆ.

## ಭಾಗ ಒಂದು

## ಹಿಂತಿರುಗಿ ನೋಡುವುದು

### ಪ್ರಾರ್ಥನೆ

ಒಟ್ಟಾಗಿ ಪ್ರಾರ್ಥನೆಯಲ್ಲಿ ಸಮಯವನ್ನು ಆರಂಭಿಸಿ.

# ಹೊಣೆಗಾರಿಕೆ

ಮಾಡಿದ ಬದ್ಧತೆಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿ. ಉದಾಹರಣೆಗೆ, ಹೀಗೆ ಕೇಳಿರಿ:

- ನೀವು ಪ್ರತಿದಿನ ಸತ್ಯವೇದವನ್ನು ಓದುತ್ತಿದ್ದೀರಾ ಅಥವಾ ವಾಕ್ಯಗಳನ್ನು ಕೇಳುತ್ತಿದ್ದೀರಾ?
- ದೇವರು ನಿಮಗೆ ಕಲಿಸಿದ್ದನ್ನು ನೀವು ಹೇಗೆ ಪಾಲಿಸುತ್ತಿದ್ದೀರಿ?
- ನೀವು ಹಂಚಿಕೊಳ್ಳಲು ಬಯಸುವ ಯಾವುದೇ ಪ್ರಾರ್ಥನೆ ವಿನಂತಿಗಳು ಅಥವಾ ಕಥೆಗಳು ಇದೆಯೇ?

# ಭಾಗ ಎರಡು
# ಮೇಲಕ್ಕೆ ನೋಡುವುದು

## ಅಧ್ಯಯನ

ಒಟ್ಟಾಗಿ ಸತ್ಯವೇದದ ಅಧ್ಯಯನ ಮಾಡುವ ಮೂಲಕ ಪಶ್ಚಾತ್ತಾಪ ಪಟ್ಟು ನಂಬುವಂತೆ ಯೇಸುವಿನ ಆಜ್ಞೆಯ ಬಗ್ಗೆ ಬೋಧಿಸಿ. ಯೇಸು ಆಜ್ಞೆಯನ್ನು ನೀಡಿದ ಸಮಯವನ್ನು ಮೊದಲು ಓದಿರಿ ಮತ್ತು ಆಜ್ಞೆಯನ್ನು ಪಾಲಿಸುವುದು ಹೇಗೆ ಎಂದು ವಿವರಿಸುವ ನಿಜವಾದ ಕಥೆಯನ್ನು ಚರ್ಚಿಸಿರಿ.

ಮಾರ್ಕ 1:14–15:

> ಯೋಹಾನನು ಸೆರೆಗೆ ಬಿದ್ದ ಮೇಲೆ ಯೇಸು ಗಲಿಲಾಯ ಸೀಮೆಗೆ ಬಂದು – ಕಾಲ ಪರಿಪೂರ್ಣವಾಯಿತು, ದೇವರ

ಕಡೆಗೆ ತಿರುಗಿಕೊಂಡು ಸುವಾರ್ತೆಯನ್ನು ನಂಬಿರಿ ಎಂದು ದೇವರ ಸುವಾರ್ತೆಯನ್ನು ಸಾರಿಹೇಳಿದನು.

ಯೇಸುವು ದೇವರಾಜ್ಯವನ್ನು ಸಾರುವ ಮೂಲಕ ಮತ್ತು ಆಜ್ಞೆಯನ್ನು ನೀಡುವ ಮೂಲಕ ತನ್ನ ಸೇವೆಯನ್ನು ಪ್ರಾರಂಭಿಸುತ್ತಾನೆ. ಈ ಆಜ್ಞೆಯು ಪಶ್ಚಾತ್ತಾಪಪಟ್ಟು ಸುವಾರ್ತೆಯನ್ನು ನಂಬುವುದು.

ಲೂಕ 19:1–10:

ಆತನು ಯೆರಿಕೋ ಊರನ್ನು ಹೊಕ್ಕು ದಾಟಿಹೋಗುತ್ತಿದ್ದನು. ಅಲ್ಲಿ ಜಕ್ಕಾಯನೆಂಬ ಹೆಸರುಳ್ಳ ಒಬ್ಬ ಮನುಷ್ಯನಿದ್ದನು; ಅವನು ಸುಂಕದ ಗುತ್ತಿಗೆದಾರನು ಮತ್ತು ಐಶ್ವರ್ಯವಂತನು. ಅವನು ಯೇಸು ಎಂಥವನೆಂದು ನೋಡಲಪೇಕ್ಷಿಸಿದರೂ ತಾನು ಗಿಡ್ಡನಾಗಿದ್ದುದರಿಂದ ಜನರ ಗುಂಪಿನ ನಿಮಿತ್ತ ನೋಡಲಾರದೇ ಹೋದನು. ಆದಕಾರಣ ಆತನನ್ನು ನೋಡುವುದಕ್ಕಾಗಿ ಮುಂದೆ ಓಡಿಹೋಗಿ ಆತನು ಬರುತ್ತಿರುವ ಮಾರ್ಗದಲ್ಲಿದ್ದ ಆಲದ ಮರವನ್ನು ಹತ್ತಿದನು. ಯೇಸು ಅಲ್ಲಿಗೆ ಬಂದು ಮೇಲಕ್ಕೆ ನೋಡಿ – ಜಕ್ಕಾಯನೇ, ತಟ್ಟನೇ ಇಳಿದು ಬಾ, ನಾನು ಈ ಹೊತ್ತು ನಿನ್ನ ಮನೆಯಲ್ಲಿ ಇಳುಕೊಳ್ಳಬೇಕು ಎಂದು ಅವನಿಗೆ ಹೇಳಲು ಅವನು ತಟ್ಟನೆ ಇಳಿದು ಬಂದು ಆತನನ್ನು ಸಂತೋಷದಿಂದ ಸೇರಿಸಿಕೊಂಡನು. ಇದನ್ನು ನೋಡಿದವರೆಲ್ಲರೂ – ಈತನು

ಪಾಪಿಯಾಗಿರುವವನ ಬಳಿಯಲ್ಲಿ ಇಳುಕೊಳ್ಳುವುದಕ್ಕೆ ಹೋಗಿದ್ದಾನೆ ಎಂದು ಗುಣುಗುಟ್ಟಿದರು. ಆದರೆ ಜಕ್ಕಾಯನು ನಿಂತುಕೊಂಡು ಸ್ವಾಮಿಗೆ – ಸ್ವಾಮಿ, ನೋಡು, ನ್ನನ ಆಸ್ತಿಯಲ್ಲಿ ಅರ್ಧವನ್ನು ಬಡವರಿಗೆ ಕೊಡುತ್ತೇನೆ; ಮತ್ತು ನಾನು ಅನ್ಯಾಯವಾ – ಗಿ ಯಾರಿಂದ ಏನಾದರೂ ಎಳಕೊಂಡದ್ದೇಯಾದರೆ ನಾಲ್ಕರಷ್ಟು ಹಿಂದಕ್ಕೆ ಕೊಡುತ್ತೇನೆ ಎಂದು ಹೇಳಿದನು. ಇದನ್ನು ಕೇಳಿ ಯೇಸು – ಈ ಹೊತ್ತು ಈ ಮನೆಗೆ ರಕ್ಷಣೆಯಾಯಿತು; ಇವನೂ ಸಹ ಅಬ್ರಾಹಾಮನ ವಂಶಿಕನ – ಲ್ಲವೇ? ಮನುಷ್ಯಕುಮಾರನು ಕೆಟ್ಟುಹೋಗಿರುವುದನ್ನು ಹುಡುಕಿ ರಕ್ಷಿಸುವುದಕ್ಕೆ ಬಂದನು ಎಂದು ಹೇಳಿದನು.

ಕಥೆಯನ್ನು ಓದಿದನಂತರ, ಕಥೆಯನ್ನು ಈ ವಿಧಾನಗಳಲ್ಲಿ ಒಂದನ್ನು ಪರಿಶೀಲಿಸಿ:

- ನೆನಪಿನಿಂದ ಕಥೆಯನ್ನು ಹೇಳಿರಿ.
- ಕಥೆಯ ಬಗ್ಗೆ ಮಾತನಾಡಿರಿ. ಏನಾಯಿತು?
- ಕಥೆಯನ್ನು ತಿರುಗಿ ಹೇಳಿರಿ ಅಥವಾ ಓದಿರಿ.
- ಕಥೆಯನ್ನು ವಿವರಿಸುವ ಬಗ್ಗೆ ಕಿರು ನಾಟಕವನ್ನು ಮಾಡಿರಿ.
- ಕಥೆಯನ್ನು ವಿವರಿಸುವ ಚಿತ್ರಗಳನ್ನು ಬರೆಯಿರಿ.

ಕಥೆಯನ್ನು ಪರಿಶೀಲಿಸಿದ ನಂತರ, ಕಥೆಯನ್ನು ಆಧರಿಸಿ ಈ ಕೆಳಗಿನ ಪ್ರಶ್ನೆಗಳನ್ನು ಚರ್ಚಿಸಿರಿ:

- ದೇವರ ಬಗ್ಗೆ ನಾವು ಏನು ಕಲಿಯುತ್ತೇವೆ?
- ಮನುಷ್ಯರ ಬಗ್ಗೆ ನಾವು ಏನು ಕಲಿಯುತ್ತೇವೆ?
- ನಾವು ಏನು ಮಾಡಬಾರದು?
- ನಾವು ಏನು ಮಾಡಬೇಕು?

ಈ ಸಾಮಾನ್ಯ ಪ್ರಶ್ನೆಗಳನ್ನು ಚರ್ಚಿಸಿದ ನಂತರ, ಈ ನಿರ್ದಿಷ್ಟ ಕಥೆಗೆ ಈ ಕೆಳಗಿನವುಗಳು ಸಹಾಯಕವಾಗಬಹುದು.

ಈ ಕೆಳಗಿನವುಗಳನ್ನು ಚರ್ಚಿಸಿರಿ:

- ‘ಪಶ್ಚಾತ್ತಾಪ’ ಎಂದರೆ ಏನು?
  ‘ಪಶ್ಚಾತ್ತಾಪ’ ಎಂದರೆ ಪಾಪದಿಂದ ಯೇಸುವಿನ ಕಡೆಗೆ ತಿರುಗಿಕೊಂಡು ಆತನನ್ನು ಹಿಂಬಾಲಿಸುವುದು.

- ‘ನಂಬಿಕೆ’ ಎಂದರೆ ಏನು?
  ‘ನಂಬಿಕೆ’ ಎಂದರೆ ಯೇಸುವನ್ನು ಕರ್ತನು ಎಂದು ನಂಬುವುದು, ಮತ್ತು ಆತನನ್ನೇ ಭರವಸಿಸುವುದು.

- ನಾವು ಯಾಕೆ ಪಶ್ಚಾತ್ತಾಪ ಪಡಬೇಕು?
  ಎಲ್ಲರೂ ಪಾಪಮಾಡಿದ್ದಾರೆ ಮತ್ತು ಯೇಸುವಿನಲ್ಲಿ ರಕ್ಷಣೆ ಬೇಕು. ಸಾಧ್ಯವಾದರೆ ಸುವಾರ್ತೆಯನ್ನು ಪರಿಶೀಲಿಸಲು, ರೋಮಾ 3:23, 6:23, 10:9–10 ಈ ವಾಕ್ಯಗಳನ್ನು ಓದಿರಿ.

- ಯಾರು ಪಶ್ಚಾತ್ತಾಪ ಪಡಬೇಕು?
  ಎಲ್ಲರೂ ಪಶ್ಚಾತ್ತಾಪ ಪಡಬೇಕು. ಅಗತ್ಯವಿದ್ದರೆ, ಅ.ಕೃ 2:38–41 ಓದಿರಿ.

- ಭರವಸೆ ಅಂದರೆ ಏನು?
  ಯೇಸುವಿನ ಸುವಾರ್ತೆಯನ್ನು ನಂಬುವ ಮೂಲಕ ನಾವು ರಕ್ಷಿಸಲ್ಪಟ್ಟಿದ್ದೇವೆ ಮತ್ತು ನಮ್ಮ ರಕ್ಷಣೆಯನ್ನು ನಾವು ಕಳೆದುಕೊಳ್ಳುವುದಿಲ್ಲ ಎಂಬ ವಿಶ್ವಾಸವೇ ಭರವಸೆ ಆಗಿದೆ. 1 ಯೋಹಾನ 1:9, ಯೋಹಾನ 10:28, ಮತ್ತು ರೋಮಾ 10:9–10 ಈ ವಾಕ್ಯಗಳನ್ನು ಓದಿರಿ.

**ಅಭ್ಯಾಸ ಮಾಡಿ**

ಪಶ್ಚಾತ್ತಾಪಪಟ್ಟು ಸುವಾರ್ತೆಯನ್ನು ನಂಬಿರಿ. ಪ್ರತಿ ದಿನ ಪಾಪದ ಪಶ್ಚಾತ್ತಾಪ ಆಗಬೇಕು.

## ಭಾಗ ಮೂರು
## ಮುಂದಾಗಿ ನೋಡುವುದು

### ಬದ್ಧತೆ

ಯೇಸುವಿನ ಕಥೆ ಮತ್ತು ಆಜ್ಞೆಯಿಂದ ಏನು ಪಾಲಿಸಬೇಕೆಂದು ಚರ್ಚಿಸಿ. ಮುಂದಿನ ಭೇಟಿಯ ಮೊದಲು ಪಾಲಿಸಬೇಕಾದ ಕೆಲುವು ಮಾರ್ಗಗಳು:

- ಪ್ರತಿದಿನ ಪಶ್ಚಾತ್ತಾಪಪಟ್ಟು ಸುವಾರ್ತೆಯನ್ನು ನಂಬಿರಿ.
- ಈ ವಾಕ್ಯದಲ್ಲಿರುವ (ಲೂಕ 19:1–10) ಕಥೆಯನ್ನು ಇತರರಿಗೆ ಹೇಳಿರಿ.

- ಜಕ್ಕಾಯನು, ಯೇಸುವಿನೊಂದಿಗೆ ಇರುವುದನ್ನು ಅನುಭವಿಸಿದನು. ಇಂದು ನಾವು ಯೇಸುವಿನ ಬಗ್ಗೆ ಕಲಿಯುವ ಪ್ರಾಥಮಿಕ ಮಾರ್ಗವೆಂದರೆ, ಸತ್ಯವೇದ ಓದುವುದು ಅಥವಾ ಕೇಳುವುದು. ಪ್ರತಿದಿನ ಸತ್ಯವೇದ ಓದಿ ಅಥವಾ ಆಲಿಸಿ ಮತ್ತು ಈ ಅಧ್ಯಯನದ ನಾಲ್ಕು ಸಾಮಾನ್ಯ ಪ್ರಶ್ನೆಗಳ ಬಗ್ಗೆ ಯೋಚಿಸಿ.

## ಪ್ರಾರ್ಥನೆ

ಪ್ರಾರ್ಥನೆಯಲ್ಲಿ ಸಮಯವನ್ನು ಒಟ್ಟಿಗೆ ಮುಕ್ತಾಯ ಮಾಡಿರಿ. ಎಲ್ಲರೂ ಮಾಡಿದ ಬದ್ಧತೆಗಳಿಗಾಗಿ ಪ್ರಾರ್ಥಿಸಿ.

**ದೇವರ ರಾಜ್ಯದ ಬೆಳವಣಿಗೆಗೆ**

© 2023 ದೇವರ ರಾಜ್ಯದ ಬೆಳವಣಿಗೆಗೆ
ದೇವರ ರಾಜ್ಯದ ಬೆಳವಣಿಗೆಗೆ ಹೆಚ್ಚಿನ ವಿಷಯಗಳಿಗಾಗಿ,
ಭೇಟಿ ನೀಡಿ: **www.forkingdomgrowth.com**

Scripture quotations are from The Holy Bible, BSI - Kannada - J.V. published by The Bible Society of India. Used by permission.
All rights reserved.

ರಾಜ್ಯದ ಬೆಳವಣಿಗೆಗೆ ಈ ವಸ್ತುಸಂಗ್ರಹಕ್ಕೆ ಕೊಡುಗೆ ನೀಡಿದ ಎಲ್ಲರಿಗೂ ತುಂಬಾ ಧನ್ಯವಾದಗಳು. ಕರ್ತನಲ್ಲಿ ನಿಮ್ಮ ಸೇವೆ ಎಂದಿಗೂ ವ್ಯರ್ಥವಾಗುವುದಿಲ್ಲ.